# ಚಂದ್ರಯಾನಿ ಯುಸಾಕು

ಈತ ಯುಸಾಕು ಮೇಜವ. ಜಪಾನಿನ ಕೋಟ್ಯಧಿಪತಿ. ಅಷ್ಟೇ ಹೇಳಿದರೆ ವಿಶೇಷವೇನಿಲ್ಲ. 2023ರಲ್ಲಿ ಸ್ಪೇಸ್‌ಎಕ್ಸ್ ಕಂಪೆನಿಯು ಚಂದ್ರನ ಸುತ್ತ ಪ್ರವಾಸಕ್ಕೆ ಕರೆದೊಯ್ಯಲಿರುವ ಜಗತ್ತಿನ ಮೊತ್ತ ಮೊದಲ ಪ್ರವಾಸಿಗನಾಗಿ ಈತ ಆಯ್ಕೆಯಾಗಿದ್ದಾನೆ. ಅದೇ ವಿಶೇಷ.

ಎಲಾನ್ ಮಸ್ಕ್ ಎಂಬ ಸಾಹಸೀ ಉದ್ಯಮಿ ಬಾಹ್ಯಾಕಾಶ ಪ್ರವಾಸೋದ್ಯಮದ ಸಾಧ್ಯತೆಗಳನ್ನು ನಿಜವಾಗಿಸಲು ರೂಪಿಸಿದ ಕಂಪನಿ ಸ್ಪೇಸ್ ಎಕ್ಸ್. ಕಳೆದ 10– 15 ವರ್ಷಗಳಿಂದಲೂ, ನಾಗರಿಕರನ್ನು ಬಾಹ್ಯಾಕಾಶ ಪ್ರವಾಸಕ್ಕೆ ಕರೆದೊಯ್ಯುವ ಬಗ್ಗೆ ಸಂಶೋಧನೆ, ಪ್ರಯೋಗಗಳು ನಡೆದೇ ಇವೆ. ಪ್ರತಿವರ್ಷ ಈ ಸಾಹಸೋದ್ಯಮಕ್ಕೆ ಕೋಟ್ಯಂತರ ಡಾಲರ್‌ಗಳನ್ನು ವ್ಯಯಿಸಲಾಗುತ್ತಿದೆ. ಒಂದೆರಡು ಸಲ ಹೀಗೆ ನಡೆಸಿದ ಉಡ್ಡಯನದ ಪ್ರಯತ್ನಗಳು ವಿಫಲವಾದದ್ದೂ ವರದಿಯಾಗಿತ್ತು. ಇದೀಗ ಸಿಹಿ ಸುದ್ದಿ ಬಂದಿದೆ. ಸ್ಪೇಸ್‌ಎಕ್ಸ್ ಕಂಪನಿಯು 2023ರಲ್ಲಿ ನಾಗರಿಕರ ಬಾಹ್ಯಾಕಾಶ ಪ್ರವಾಸದ ಮೊದಲ ಟ್ರಿಪ್ ಆರಂಭಿಸಲಿದೆ. ಈ ಪ್ರವಾಸಕ್ಕೆ ಟಿಕೆಟ್ ಬುಕ್ ಮಾಡಲು ವರ್ಷದ ಹಿಂದೆ ಜಾಹೀರಾತು ನೀಡಲಾಗಿತ್ತು. ಸಾವಿರಾರು ಜನ ಟಿಕೆಟ್ ಬುಕ್ ಮಾಡಿದ್ದಾರೆಂಬ ಸುದ್ದಿಯೂ ಇತ್ತು. ಈಗ ಅವರಲ್ಲಿ ಜಪಾನಿನ ಉದ್ಯಮಿ ಯುಸಾಕು ಮೇಜವ ಮೊದಲ ಪ್ರಯಾಣಿಕ ಎಂದು ಲಾಸ್ ಏಂಜಲಿಸ್‌ನಲ್ಲಿರುವ ಸ್ಪೇಸ್‌ಎಕ್ಸ್ ಕಚೇರಿ ನಿರ್ಧರಿಸಿದೆ.

ಈ ಸುದ್ದಿಯನ್ನು ಯುಸಾಕು ಮೇಜವ ಸಂಭ್ರಮದಿಂದಲೇ ಹಂಚಿಕೊಂಡಿದ್ದಾರೆ. 'ತುಂಬ ಎಕ್ಸೈಟ್ ಆಗಿದ್ದೇನೆ. ನನ್ನ ಜತೆಗೆ ಕಲಾವಿದರು, ಶಿಲ್ಪಿಗಳ ಸಹಿತ ಇನ್ನೂ 6–8 ಜನ ಪ್ರವಾಸಕ್ಕೆ ಹೊರಡಲಿದ್ದಾರೆ' ಎಂದಿದ್ದಾರೆ ಯುಸಾಕು.

ಮರುಬಳಕೆ ಮಾಡಬಹುದಾದ ಬಿಗ್ ಫಾಲ್ಕನ್ ರಾಕೆಟ್‌ನ ವ್ಯೋಮನೌಕೆಯಲ್ಲಿ ಈ ಪ್ರವಾಸ ನಡೆಯಲಿದೆ. 'ಚಂದ್ರನ ಸುತ್ತ ಒಂದು ರೌಂಡ್ ಹೊಡೆಯುವುದು, ಮರಳಿ ಭೂಮಿಗೆ ಕರೆತರುವುದು. ಈ ಮೂಲಕ ಚಂದ್ರಲೋಕಕ್ಕೆ ಪ್ರಯಾಣಿಸುವ ಜಗತ್ತಿನ ಯಾವುದೇ ನಾಗರಿಕನ ಕನಸನ್ನು ನನಸು ಮಾಡುವುದು ನಮ್ಮ ಗುರಿ' ಎಂದಿದೆ ಸ್ಪೇಸ್‌ಎಕ್ಸ್.

2002ರಲ್ಲಿ ಉದ್ಯಮಿ ಎಲಾನ್ ಮಸ್ಕ್ ಸ್ಥಾಪಿಸಿದ ಕಂಪೆನಿ ಸ್ಪೇಸ್ ಎಕ್ಸ್. ಈ ಕಂಪನಿ ಎಲೆಕ್ಟ್ರಿಕ್ ಕಾರುಗಳನ್ನು ಉತ್ಪಾದಿಸುವ ಕಂಪನಿಯೂ ಹೌದು. ಈ ಕಂಪನಿಯು, ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಜತೆಗೆ, ಬಾಹ್ಯಾಕಾಶದ ಕೆಲವು ಕೇಂದ್ರಗಳಿಗೆ ಸರಕು ಸರಂಜಾಮುಗಳನ್ನು ಸಾಗಿಸುವ ಒಪ್ಪಂದಕ್ಕೂ ಸಹಿ ಹಾಕಿದೆ. ಚಂದ್ರನಲ್ಲಿಗೆ ಮಾತ್ರವಲ್ಲ ದೂರದ ಮಂಗಳ ಗ್ರಹಕ್ಕೂ ಸರಕು ಸಾಗಿಸುವ ಯೋಜನೆ ಇದೆಯಂತೆ. ಈ ಬಾಹ್ಯಾಕಾಶ ಪ್ರವಾಸ ಯೋಜನೆಯ ಖರ್ಚು ವೆಚ್ಚ ತಗ್ಗಿಸಲು ರಾಕೆಟ್‌ಗಳನ್ನು ಮರುಬಳಕೆ ಮಾಡುವಂತೆ ರೂಪಿಸಲಾಗುತ್ತಿದೆ. ಸದ್ಯಕ್ಕೆ ಮರುಬಳಕೆಯ ರಾಕೆಟ್‌ಗಳು ಸಿದ್ಧವಾಗಿಲ್ಲ. 2023ರೊಳಗೆ ಸಿದ್ಧವಾಗಬಹುದು.

ಆದರೆ ಸ್ಪೇಸ್‌ಎಕ್ಸ್ ಕಂಪೆನಿಯ ಈ ಚಂದ್ರಲೋಕ ಪ್ರಯಾಣ ಯೋಜನೆ 2023ರಲ್ಲಿ ಸಾಕಾರಗೊಳ್ಳಲಿದೆ ಎನ್ನುವುದರ ಬಗ್ಗೆ ಸಾಕಷ್ಟು ಅನುಮಾನಗಳಿವೆ. 'ಸ್ಪೇಸ್‌ಎಕ್ಸ್ ಕಂಪನಿ ಈವರೆಗೆ ಯಾವುದೇ ಒಂದು ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಗಮನ ಕೊಟ್ಟಿಲ್ಲ. ಒಂದು ಯೋಜನೆ ಪೂರ್ಣಗೊಳಿಸುವ ಮುನ್ನವೇ ಇನ್ನೂ ಹಲವು ಯೋಜನೆಗಳನ್ನು ಪ್ರಕಟಿಸಿದೆ. ಏಕಕಾಲಕ್ಕೆ ಎಲ್ಲ ಯೋಜನೆಗಳನ್ನೂ ಆರಂಭಿಸುವ ಈ ಕಂಪನಿಯನ್ನು ನಂಬುವುದು ಕಷ್ಟ' ಎನ್ನುವ ಮಾತುಗಳು ಕೇಳಿಬಂದಿವೆ. 1968ರಲ್ಲಿ ಅಮೆರಿಕವು ಚಂದ್ರನ ಪ್ರದಕ್ಷಿಣೆಗೆ ಮೊದಲ ಗಗನಯಾತ್ರಿಯನ್ನು ಕಳುಹಿಸಿದ್ದು, ಆ ಬಳಿಕ ಈವರೆಗೆ ಒಟ್ಟು 24 ಯಾತ್ರಿಗಳು ಚಂದ್ರಗ್ರಹದ ಯಾತ್ರೆ ಕೈಗೊಂಡಿದ್ದಾರೆ. ಆದರೆ ಖಾಸಗಿ ಪ್ರವಾಸ ಯೋಜಿಸಿ ವ್ಯಕ್ತಿಯೊಬ್ಬರನ್ನು ಚಂದ್ರನ ಕಕ್ಷೆಗೆ ಕರೆದೊಯ್ಯುವುದನ್ನು ಖಚಿತ ಪಡಿಸಿರುವುದು ಇದೇ ಮೊದಲು.

ಜೊಜೊ (Zozo) ಎನ್ನುವ ಆನ್‌ಲೈನ್ ಫ್ಯಾಷನ್ ಮಾರಾಟ ಕಂಪನಿಯ ಸಿಇಒ ಮತ್ತು ಸ್ಥಾಪಕ ಯುಸಾಕು ಮೇಜವ. ಪಂಕ್ ಬ್ಯಾಂಡ್‌ನಲ್ಲಿ ಒಂದೊಮ್ಮೆ ಡ್ರಮ್ ಬಾರಿಸುತ್ತಿದ್ದ ಈ ವರ್ಣರಂಜಿತ ವ್ಯಕ್ತಿಗೆ ಈಗ 42ರ ಹರೆಯ. ಜಪಾನಿನ ಗಾಸಿಪ್ ಪತ್ರಿಕೆಗಳಲ್ಲಿ ಈತನ ಹೆಸರು ಸದಾ ಕಾಣಿಸಿಕೊಳ್ಳುತ್ತಿದೆ. ಈತ ಹೊಂದಿರುವ ವಿದೇಶೀ ಮತ್ತು ಜಪಾನೀ ಕಲಾಕೃತಿಗಳು, ಐಷಾರಾಮಿ ಕಾರುಗಳು ಮತ್ತು ಸೆಲೆಬ್ರಿಟಿ ಗರ್ಲ್‌ಫ್ರೆಂಡ್‌ಗಳ ಬಗ್ಗೆ ದಂತಕಥೆಗಳೇ ಇವೆ.

ಹೈಸ್ಕೂಲ್‌ನಲ್ಲಿ ಇರುವಾಗಲೇ ಸಂಗೀತದ ಹುಚ್ಚು ಹತ್ತಿಸಿಕೊಂಡು ತನ್ನದೇ ಆದ ಬ್ಯಾಂಡ್ ಕಟ್ಟಿದ ಯುಸಾಕು, ಈಗಲೂ ಸಂಗೀತದ ಮೋಹ ಬಿಟ್ಟಿಲ್ಲ. ಹೈಸ್ಕೂಲ್ ಮುಗಿದ ತಕ್ಷಣ ವಿದ್ಯಾಭ್ಯಾಸಕ್ಕೆ ಸಲಾಂ ಹೊಡೆದು, ಅಮೆರಿಕಕ್ಕೆ ಗರ್ಲ್‌ಫ್ರೆಂಡ್ ಜೊತೆಗೆ ಪ್ರಯಾಣಿಸಿ ಅಲ್ಲಿ ಸಿ.ಡಿ. ಮತ್ತು ಸಂಗೀತದ ರೆಕಾರ್ಡ್‌ಗಳನ್ನು ಸಂಗ್ರಹಿಸತೊಡಗಿದ. 1995ರಲ್ಲಿ ಈತ ಮರಳಿ ಜಪಾನಿಗೆ ಬಂದು, ಇಂಟರ್‌ನೆಟ್‌ನಲ್ಲಿ ವಿದೇಶಿ ಸಿಡಿ ಮತ್ತು ರೆಕಾರ್ಡ್‌ಗಳ ವ್ಯಾಪಾರ ಆರಂಭಿಸಿದ.

1998ರಲ್ಲಿ ಸ್ಟಾರ್ಟ್ ಟುಡೇ ಎಂಬ ಕಂಪೆನಿ ಆರಂಭಿಸಿದ. ಬಳಿಕ ಆನ್‌ಲೈನ್‌ನಲ್ಲಿ ಬಟ್ಟೆಬರೆಗಳ ಮಾರಾಟ ಶುರು ಮಾಡಿದ. 2004ರಲ್ಲಿ ಷೇರು ಮಾರುಕಟ್ಟೆ ಪ್ರವೇಶಿಸಿದ ಕಂಪನಿ ಇವತ್ತು ಜಪಾನಿನ ದೈತ್ಯ ಕಂಪನಿಗಳಲ್ಲಿ ಒಂದು. ಇತ್ತೀಚೆಗೆ ಆರಂಭವಾದ ಜೊಜೊ ಕಂಪನಿ 72 ದೇಶಗಳಲ್ಲಿ ವ್ಯಾಪಾರ ಮಾಡುತ್ತಿದೆ. ನಿವ್ವಳ 2.7 ಶತಕೋಟಿ ಅಮೆರಿಕನ್ ಡಾಲರ್ ಸಂಪತ್ತು ಹೊಂದಿರುವ ಯುಸಾಕು, ಪತ್ನಿಯನ್ನು ತ್ಯಜಿಸಿದ್ದು, ಮೂವರು ಮಕ್ಕಳು ಜೊತೆಗಿದ್ದಾರೆ.

ಇನ್ನೊಂದು ಸಂಸ್ಥೆ ಬ್ಲೂ ಒರಿಜಿನ್, ಚಂದ್ರನ ಕಕ್ಷೆಯ ಯಾತ್ರೆಗೆ ಪ್ರತಿಯೊಬ್ಬ ಪ್ರವಾಸಿಗೆ 2 ರಿಂದ 3 ಲಕ್ಷ ಡಾಲರ್ ವೆಚ್ಚ ತಗಲುತ್ತದೆ ಎಂದು ಪ್ರಕಟಿಸಿತ್ತು. ಆದರೆ ಯುಸಾಕು ಅವರ ಟಿಕೆಟ್‌ಗೆ ಎಷ್ಟು ಬೆಲೆ ಎನ್ನುವುದು ಗೊತ್ತಾಗಿಲ್ಲ. ಯುಸಾಕು ಕೂಡಾ ಹೇಳಿಲ್ಲ; ಸ್ಪೇಸ್ ಎಕ್ಸ್ ಕಂಪನಿಯೂ ಈ ಬಗ್ಗೆ ಬಾಯಿ ಬಿಟ್ಟಿಲ್ಲ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65